ಶ್ರೀ ಕೆ. ಮಲ್ಲಪ್ಪ. - ಸ್ವಾಮಿ. ಹೇಮಾವತಿ ಜಲಾಷಯದಲ್ಲಿ ಬಾವಿ ಇದೆ ಎಂದು ಮಂತ್ರಿಗಳು ತಮ್ಮ ವರದಿಯಲ್ಲಿ ಹೇಳಿದರು. ಅಲ್ಲಿ ಬಾವಿ ಇಲ್ಲ. ತಾವು ನೋಡಿದಹಾಗೆ ಪೈಪು ಒಳಪಡಿಸಿರುವಂಥಾದ್ದು ಜಲಾಷಯದ ಮೇಲ್ಬಾಗದಲ್ಲಿದೆ. ನೀರು ಕಾಲುವೆಯಲ್ಲಿ ಬಂದರೆ; ಬಾವಿ ಕೆಳಗೆ ನೀರು ಹೋಗುತ್ತೆ. ನೀರು ಹೋದಾಗ ಪಂಪ್ ಮಾಡುವುದಕ್ಕಾಗುವುದಿಲ್ಲ. ಓವರ್‌ಹೆಡ್ ಟ್ಯಾಂಕ್‌ಗೆ ನೀರು ಸಪ್ಲೈ ಮಾಡುವುದಕ್ಕಾಗುವುದಿಲ್ಲ. ಈಗ ಇರತಕ್ಕ ಬಾವಿಯನ್ನು ಇನ್ನು ಹತ್ತಿರದ ಜಾಗಕ್ಕೆ ವರ್ಗ ಮಾಡಬೇಕೆಂದು ಹೇಳುತ್ತೇನೆ. ಗೋರೂರಿನಿಂದ ಅರಕಲಗೂಡುಗೆ ಸಮಾರು ೪ ಮೈಲಿ ದೂರ ಇದೆ. ಆ ಭಾಗದಲ್ಲಿ ಸುಮಾರು ೧೪ ಕಡೆ ಗುಡಿಸಲುಗಳು ಬರುತ್ತವೆ. ಈ ಗುಡಿಸಲುಗಳವರಿಗೆ ನೀರು ಸಿಗುತ್ತಿಲ್ಲ; ೧೪ ಗುಡಿಸಲುಗಳು ಮುನಿಸಿಪಲ್ ಲಿಮಿಟ್‌ನಲ್ಲಿ ಬರುತ್ತವೆ. ಇವರು ಕಂದಾಯ ಕಟ್ಟುತ್ತಿದ್ದಾರೆ. ಅರಕಲಗೂಡು ಟೌನ್‌ನಲ್ಲಿ ಎಷ್ಟು ಪಾಪುಲೇಷನ್ ಇದೆಯೋ? ಅಷ್ಟು ಜನಸಂಖ್ಯೆ ಈ ಗುಡಿಸಲುಗಳಲ್ಲಿ ಇದೆ. ನಮ್ಮ ಭಾಗದಲ್ಲಿ ಮಳೆ ಬಿದ್ದು ಎರಡು ತಿಂಗಳ ಆಯಿತು; ನೀರು ಇಲ್ಲದೆ ಕೆರೆಗಳು ಒಣಗಿ ಹೋಗಿವೆ; ೧೪ ಭಾಗದಲ್ಲಿರುವ ಗುಡಿಸಲುಗಳವರು ನೀರು ಇಲ್ಲದೆ; ನೀರು ತರುವುದಕ್ಕಾಗಿ ಹೇಮಾವತಿ ಜಲಾಶಯಕ್ಕೆ ಹೋಗಬೇಕು; ಇಲ್ಲದಿದ್ದರೆ; ಟೌನ್ ಒಳಗಡೆ ಬಂದು ನೀರು ತೆಗೆದುಕೊಂಡು ಹೋಗುವಂಥ ಪರಿಸ್ಥಿತಿ ಇದೆ. ಮನೆಯಲ್ಲಿ ಒಬ್ಬರು ನೀರು ತರುವುದಕ್ಕಾಗಿಯೇ ಇರಬೇಕಾಗಿದೆ. ಮೊನ್ನೆ ಚೀಫ್ ಇಂಜಿನಿಯರ್ ರವರನ್ನು ಭೇಟಿ ಮಾಡಿದ್ದೆ; ಬೋರ್ಡ್ ಅಪ್ರೂವಲ್ ಆಗಿದೆ ಎಂದು ಹೇಳಿದರು; ಒಂದು ವರ್ಷ ವಾಯಿ ತು. ಆದ್ದರಿಂದ ತಕ್ಷಣದಲ್ಲಿ ಸ್ಕೀಂನ್ನು ಇಂಪ್ಲಿಮೆಂಟ್ ಮಾಡಿ; ಈ ಸ್ಕೀಮಿನೊಳಗೆ, ೧೪ ಭಾಗದ ಗುಡಿಸಲುಗಳನ್ನು ತರುವ ವ್ಯವಸ್ಥೆ ಮಾಡಿಕೊಡುತ್ತಿರಾ ಸ್ವಾಮಿ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ.—ಸ್ವಾಮಿ, ನನ್ನ ಮಿತ್ರರಾದಂಥ ಮಾನ್ಯ ಮಲ್ಲಪ್ಪನವರು ಇದೇ ಸಭೆಯಲ್ಲಿ ಅರಕಲಗೂಡು ಪುರಸಭೆಗೆ ಹಣ ಕೊಟ್ಟಿಲ್ಲವೆನ್ನುವ ಮಾದವನ್ನು ಇಟ್ಟಿದ್ದರು. ೭೯-೮೦ ನೇ ಸಾಲಿಗೆ ಎರಡು ಲಕ್ಷ ರೂಪಾಯಿಗಳನ್ನು ನೀರು ಸರಬರಾಜಿಗಾಗಿ ಕೊಟ್ಟಿದ್ದೇವೆ. ಕುಡಿಯುವ ನೀರಿನ ಅಭಾವ ಇದ್ದ ಪಕ್ಷದಲ್ಲಿ ಮೊದಲು ಕುಡಿಯುವ ನೀರನ್ನು ಒದಗಿಸುವ ವ್ಯವಸ್ಥೆ ಮಾಡಬೇಕೆಂದು ಜಿಲ್ಲಾಧಿಕಾರಿಗಳಿಗೆ ನಿರ್ದಿಷ್ಟವಾಗಿ ಆದೇಶ ಕೊಟ್ಟಿದ್ದೇವೆ. ನೀರಿನ ಅಭಾವ ಇಲ್ಲದೇ ಇದ್ದರೆ ಬೇರೆ ಅಭಿವೃದ್ಧಿ ಕಾರ್ಯಗಳಿಗೆ ಹಣ ಉಪಯೋಗ ಮಾಡಬಹುದು. ಈಗ ಎರಡು ಲಕ್ಷ ರೂಪಾಯಿ ಕೊಟ್ಟಿದ್ದೇವೆ; ಅದು ಸಾಲುವುದಿಲ್ಲವೆಂದರೆ ಇನ್ನು ೨ ಲಕ್ಷ ರೂಪಾಯಿಗಳನ್ನು ಪೆಚ್ಚಿಗೆ ಕೊಡುತ್ತೇವೆ. ಗುಡಿಸಲುಗಳ ವಿಚಾರವನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಕೆ. ಮಲ್ಲಪ್ಪ.—ಸ್ವಾಮಿ, ಮಾನ್ಯ ಮಂತ್ರಿಗಳಿಗೆ ಗೊತ್ತಿದ್ದಂತೆ ಕೊಣನೂರಿನಲ್ಲಿಯೂ ಕೂಡ ನೀರಿನ ಅಭಾವ ಇದೆ. ಅಲ್ಲಿಗೂ ಕೂಡ ನೀರಿನ ವ್ಯವಸ್ಥೆ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ.—ಸ್ವಾಮಿ, ಅರಕಲಗೂಡುಗೆ ಹೋದಾಗ ಕೊಣನೂರಿಗೆ ಹೋಗಿ ಅಲ್ಲಿರತಕ್ಕ ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಂಡು ಅದಕ್ಕೆ ಆಗತಕ್ಕ ಹಣವನ್ನು ಕೊಡುತ್ತೇನೆಂದು ಹೇಳುತ್ತೇನೆ.

(*ii*) *re: dismissal of employees in Poonam Theatre in Jayanagar*

SRI M. CHANDRASHEKHAR —(Jayanagar) I call the attention of the Minister for Labour and Excise to a matter regarding dismissal of some employees of Poonam Theatre, Jayanagar Bangalore.

SRI R.S. PATIL (Minister for Labour and Excise) —Sir, I wish to make the following statement.

The facts, as gathered from the Labour Department, are that the management of the Poonam Theatre, Jayanagar, Bangalore, has refused work to about 30 employees after they made an oral representation for minimum rate of wages and other matters. Subsequent

to this, the management has employeed a new set of employees. Those who were thus refused employment have been on strike before the establishment since 3-5-1979.

On receiving a complaint from the President, Akila Karnataka Chalana Chitra Mandiragala Karmikara Sangha, Bangalore, the Assistant Labour Commissioner obtained a report in the matter. It is seen from the report that the employer, Sri Mazharuddin, a licence holder of the Corporation, has not maintained any registers required under various enactments. He has also not registered the establishment under the Karnataka Shops and Commercial Establishment Act, nor has he been paying the minimum rates of wages. He has, on the face of it, contravened the provisions of the Karnataka Shops and Commercial Establishment Act and the Minimum Wages Act. A Show-Cause Notice has been issued to the management for various violations, such as non-registration and payment of less than the minimum rates of wages. Directions have already been issued to the concerned officers of the Labour Department to intervene and take up the matter in conciliation. Conciliation proceedings have already been taken up.

೧-೦೦ ಪಿ.ಎಂ.

ಶ್ರೀ ಎಂ. ಚಂದ್ರಶೇಖರ್.—ಸ್ವಾಮಿ, ನಾನು ಇದೇ ಸದನದಲ್ಲಿ ಹೋದವರ್ಷ ಜಯನಗರದಲ್ಲಿ ಇರತಕ್ಕ ಪೂರ್ಣಂ ಥಿಯೇಟರ್ ಬಗ್ಗೆ ಒಂದು ಪ್ರಶ್ನೆಯನ್ನು ಹಾಕಿದ್ದೆ. ಹಿಂದಿನ ಮಾನೇಜ್‌ಮೆಂಟಿನವರು ಕಾರ್ಪೊರೇಷನ್‌ಗೆ ೨ ಲಕ್ಷ ರೂಪಾಯಿ ಸಿಂಡಿಕೇಟ್‌ಬ್ಯಾಂಕಿಗೆ ೨ ಲಕ್ಷ ರೂಪಾಯಿ ಬಾಕಿ ಕೊಡಬೇಕಾಗಿದ್ದರಿಂದ ಅವರನ್ನು ಎವಿಕ್ಟ್ ಮಾಡಿಸಿ ೭ ೮ ತಿಂಗಳು ನಡೆಯದಂತೆ ಮಾಡಿ ಹೊಸದಾಗಿ ಟೆಂಡರ್ ಕರೆಸಿದರು. ಶ್ರೀಮಜರುದ್ದೀನ್ ಎನ್ನುವವರು ಕೇವಲ ತುಮಕೂರಿನಲ್ಲಿ ಒಬ್ಬ ಶಾಲಾ ಅಧ್ಯಾಪಕರು. ಇವ್ವೊತ್ತು ಸಿನಿಮಾ ರನ್ ಮಾಡಬೇಕಾದರೆ ಕೆಲವು ಕಾನೂನುಗಳು ಇರುತ್ತವೆ. ಅವರು ಇನ್‌ಕಂಟ್ಯಾಕ್ಸ್ ಪೇಯಿ ಆಗಿದ್ದಾನೆಯೇ. ಆತನಿಗೆ ಫೈನಾನ್ಸಿಯಲ್ ಸೌಂಡ್ ಇದೆಯೇ, ಅದನ್ನು ನೋಡಿಕೊಂಡು ಟೆಂಡರ್ ಮಾಡಬೇಕಾಗಿತ್ತು. ಅದನ್ನು ಮಾಡದೇ ಒಂದೇ ಒಂದು ಹೈಯೆಸ್ಟ್ ಬಿಡ್ಡರ್ ಎಂದು ಕೊಟ್ಟಿದ್ದಾರೆ. ಈತ ಬೇನಾಮಿ ಬಾಡಿಗೆದಾರ. ಹಿಂದೆ ಕಾರ್ಪೊರೇಷನ್‌ಗೆ, ಸಿಂಡಿಕೇಟ್‌ಬ್ಯಾಂಕಿಗೆ ಸರ್ಕಾರಕ್ಕೆ ಯಾರು ಸಾಲ ಕೊಡಬೇಕಾಗಿತ್ತೋ ಅದೇ ಜನ ಈ ಸಿನಿಮಾ ಮ್ಯಾನೇಜ್‌ಮೆಂಟ್ ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಈಗ ಕಾರ್ಪೊರೇಷನ್‌ಗೆ, ಸಿಂಡಿಕೇಟ್ ಬ್ಯಾಂಕಿಗೆ ಮೋಸ ಮಾಡಿದ್ದು ಅಲ್ಲದೇ ಕಾರ್ಮಿಕರಿಗೂ ಕೂಡ ಮೋಸ ಮಾಡಿದ್ದಾರೆ. ಅವರಿಗೆ ಸರಿಯಾಗಿ ಮಿನಿಮಮ್ ವೇಜಸ್ ಕೊಟ್ಟಿಲ್ಲ. ಅವರಲ್ಲಿ ಸರಿಯಾದಂತಹ ಅಕೌಂಟ್ಸ್ ಇಲ್ಲ, ಪುಸ್ತಕಗಳು ಇಲ್ಲ. ಇಂತಹ ಸಂದರ್ಭದಲ್ಲಿ ಕನ್‌ಸಿಲಿಯೇಷನ್ ಪ್ರೊಸೀಡಿಂಗ್ಸ್ ಹ್ಯಾವ್ ಅಲ್‌ರೆಡಿ ಟೇಕನ್ ಅಪ್ ಎಂದು ಯಾವರೀತಿ ಹೇಳುತ್ತೀರಾ? ಈಗ ಅವರು ಕಾನೂನಿಗೆ ವಿರುದ್ಧವಾಗಿ ನಡೆದುಕೊಂಡಿರುವುದರಿಂದ ನೇರವಾಗಿ ಕ್ರಮ ತೆಗೆದುಕೊಳ್ಳಬೇಕು ಲೈಸೆನ್ಸ್ ಕ್ಯಾನ್ಸಲ್ ಮಾಡಲಿಕ್ಕೆ ರೆಕಮೆಂಡ್ ಮಾಡಬೇಕಾಗಿತ್ತು. ಈಗ ೩೦ ಜನರು ಏನಿದ್ದಾರೆ ಅವರನ್ನು ಪೋಲಿಸರಿಂದ ಹೊರದೂಡಿಸಿ, ಹೊಸ ಜನರನ್ನು ಅಲ್ಲಿ ಕೆಲಸಕ್ಕೆ ಇಟ್ಟುಕೊಂಡಿದ್ದಾರೆ. ಆದುದರಿಂದ ನಿಮ್ಮ ಲೇಬರ್ ಡಿಪಾರ್ಟ್‌ಮೆಂಟ್ ಮುಂದಿನ ಕ್ರಮ ಯಾವರೀತಿ ತೆಗೆದುಕೊಳ್ಳುತ್ತೀರಾ ಎನ್ನುವುದನ್ನು ತಿಳಿಸಬೇಕು.

ಶ್ರೀ ಆರ್. ಎಸ್. ಪಾಟೀಲ್.—ಈಗ ಸಿನಿಮಾ ನಡೆಸತಕ್ಕವರು ಕಾರ್ಪೊರೇಷನ್‌ಗೆ ಬಾಕಿ ಕೊಡುವುದು ಇದೆ, ಸಿಂಡಿಕೇಟ್ ಬ್ಯಾಂಕಿಗೆ ಬಾಕಿ ಕೊಡುವುದು ಇದೆ, ಅವರು ತುಮಕೂರಿನಲ್ಲಿ ಉಪಾಧ್ಯಾಯ

ರಾಗಿದ್ದಾರೆ; ಬೇನಾಮಿ ಬಾಡಿಗೆದಾರರಾಗಿದ್ದಾರೆ ಎಂದು ಹೇಳುವುದೆಲ್ಲಾ ನಮ್ಮ ಇಲಾಖೆಗೆ ಸಂಬಂಧವಿಲ್ಲ. ಈಗ ಇನಾಮ್ ಸಾಬಿಗೂ ಗೋಕುಲಾಷ್ಟಮಿಗೂ ಸಂಬಂಧ ಮಾಡಲಿಕ್ಕೆ ಹೋಗಿದ್ದೀರಾ.

ಶ್ರೀ ಎಂ. ಚಂದ್ರಶೇಖರ್.—ಕಾರ್ಮಿಕರಿಗೆ ಮೋಸ ಮಾಡಿದ್ದಾರೆ.

ಶ್ರೀ ಸಿ.ಎಂ. ಇಬ್ರಾಹಿಂ.—ಸ್ವಾಮಿ, ನಾನು ಸಂಸ್ಕೃತ ವಿದ್ಯಾರ್ಥಿ, ನಮಗೆ ಹೇಳುತ್ತಿದ್ದೀರಾ.

ಶ್ರೀ ಆರ್.ಎಸ್. ಪಾಟೀಲ್.—ಕಾರ್ಮಿಕರ ವಿಚಾರಕ್ಕೂ ನಮಗೂ ಸಂಬಂಧ ಇದೆ. ಅಲ್ಲಿ ನಡೆದಿರತಕ್ಕ ಅಕ್ರಮ ಸ್ಪಷ್ಟವಾಗಿ ತಿಳಿಸಿದ್ದೇನೆ. ಅವರು ಷಾಪ್ಸ್ ಅಂಡ್ ಕಮರ್ಷಿಯಲ್ ಎಸ್ಟಾಬ್ಲಿಷ್‌ಮೆಂಟ್ ಆಕ್ಟ್ ಕೆಳಗೆ ರಿಜಿಸ್ಟರ್ ಮಾಡಿಲ್ಲ. ಕನಿಷ್ಟ ವೇತನ ಕೊಟ್ಟಿಲ್ಲ. ಅಲ್ಲಿ ಸರಿಯಾಗಿ ರಿಜಿಸ್ಟರ್ ಮೈನ್‌ಟೈನ್ ಮಾಡಿಲ್ಲ. ಈಗ ಮೊದಲಿದ್ದಂತಹ ಎಲ್ಲ ಜನರನ್ನು ತೆಗೆದು ಹೊಸದಾಗಿ ಜನರನ್ನು ತೆಗೆದು ಕೊಂಡಿದ್ದಾರೆ. ಈ ರೀತಿ ಎಲ್ಲಾ ಅಕ್ರಮಗಳು ಕೂಡ ಇದೆ. ಆದ್ದರಿಂದ ಕಾನೂನಿಗೆ ಅನುಗುಣವಾಗಿ ಅವನಿಗೆ ಷೋಕಾಸ್ ನೋಟೀಸ್ ಕೊಟ್ಟಿದ್ದೇವೆ. ಆತನನ್ನು ಒಮ್ಮೆಯೇ ಹೊರಗೆ ಹಾಕಲಿಕ್ಕೆ ಬರುವುದಿಲ್ಲ. ಮೊದಲು ಷೋಕಾಸ್ ನೋಟೀಸ್ ಕೊಡಬೇಕು. ವಿವಿಧವಾದ ಕ್ರಮ ತೆಗೆದುಕೊಳ್ಳಲಿಕ್ಕೆ ಅವಕಾಶ ಇದೆ. ಈ ಕನ್‌ಸಿಲಿಯೇಷನ್ ಇದೇ ಬೇರೆ, ಕ್ರಮ ತೆಗೆದುಕೊಳ್ಳುವುದೇ ಬೇರೆ. ಮಾಲೀಕರೂ ಕಾರ್ಮಿಕರು ಯಾವುದಾದರೂ ಒಂದು ಒಪ್ಪಂದಕ್ಕೆ ಬರಲಿಕ್ಕೆ ಸಾಧ್ಯ ಇದೆಯೇ ಎಂದು ಕನ್‌ಸಿಲಿಯೇಷನ್ ಮಾಡಿ, ಹೊರಗಡೆ ಇರತಕ್ಕ ಕಾರ್ಮಿಕರನ್ನು ಒಳಗಡೆ ತೆಗೆದುಕೊಳ್ಳಲಿಕ್ಕೆ, ನಂತರ ಈಗ ತೆಗೆದುಕೊಂಡಿರತಕ್ಕವರನ್ನು ತೆಗೆದು ಹಾಕುವ ಬಗ್ಗೆ ೧೯ನೇ ತಾರೀಖು ಕನ್‌ಸಿಲಿಯೇಷನ್ ಮೀಟಿಂಗ್ ಲೇಬರ್ ಇಲಾಖೆಯಲ್ಲಿದೆ. ಅದು ಇತ್ಯರ್ಥವಾಗುತ್ತದೆ ಎನ್ನುವ ನಂಬಿಕೆ ಇದೆ. ಈಗಾಗಲೇ ಇದರ ಬಗ್ಗೆ ತಕ್ಷಣ ಪ್ರವೇಶ ಮಾಡಿ ಯೋಗ್ಯ ಕ್ರಮ ತೆಗೆದುಕೊಂಡಿದ್ದೇನೆ ಎಂದು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

MATTER UNDER RULE 312

re: holding of two examinations for final LL.B. of the Bangalore University.

† SRI A. LAKSHMISAGAR (Chickpet).—Sir, I wish to raise a matter under 312 pertaining to holding of two examinations for III LL.B. of Bangalore University once in May and again in July, 1979.

The Law College was started, I think, in 1948. Since then the order of examinations for law students has been 1st year, second year and third year. This was the order in which the examinations were held. From the date of the announcement of the results and the date of commencement of the examination a minimum period of 6 weeks was allowed for students to obtain their marks card, find out the mistakes if any, in the marks card, apply for retotalling and enabling the students to then face their examinations, well within time A minimum of six weeks' time was allowed to students between the date of the announcement of results and the date of examination, for this purpose. This has not been done this year. III LL.B. examination was to be held in October–November, 1978, but actually it was held in January 1979. The results were announced on 14–4–1979 and on 23–4–1979 marks cards were issued. The examination time-table was announced on 19–4–1979, without giving sufficient time for the students to apply for re-totalling of marks and to get corrections in the marks card, and to give examination fee. These are the diffi-